ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ,
ತರೀಕೆರೆ.
ಸಿಸಿ ನಂಬರ್.716 /2024

ಸಾಕ್ಷಿಯ ಹೆಸರು : ಸಿದ್ದಪ್ಪ ಸಿ.ಡಬ್ಲ್ಯು 3
ತಂದೆಯ ಹೆಸರು : ರಂಗಣ್ಣ ಪಿ.ಡಬ್ಲ್ಯು 1

ವಯಸ್ಸು : 85 ವರ್ಷ

ಉದ್ಯೋಗ : ಏನು ಇಲ್ಲ

ವಾಸ ಸ್ಥಳ : ಜೋಡಿಕೋಡಿಹಳ್ಳಿ

ದಿನಾಂಕಃ22.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಈ ಒಂದು ವರ್ಷದ ಹಿಂದೆ ನಾನು ಚಾಸ-2 ರವರ ಬಾಬ್ತು ಟಿ.ವಿ.ಎಸ್.ಬೈಕಿನ ಹಿಂಬದಿಯಲ್ಲಿ ಕೂತುಕೊಂಡು ಹೋಗುತ್ತಿದ್ದಾಗ ಭದ್ರಾವತಿ ಕಡೆಯಿಂದ ಕೆ.ಎಸ್.ಆರ್.ಟಿ.ಸಿ. ಬಸ್ಸು ವಾಹನವು ವೇಗದಿಂದ ಬಂದು ಇನ್ನೊಂದು ಲಾರಿಯನ್ನು ಹಿಂದಿಕ್ಕಲು ಹೋಗಿ ಚಾಸ-2 ರವರು ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿದರು. ನಾನು ಮತ್ತು ಚಾಸ-2 ವಾಹನದಿಂದ ಕಳಗೆ ಬಿದ್ದೆವು. ನನಗೆ ಮತ್ತು ಅವರಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು. ನನಗೆ ಸೊಂಟ, ಪಕ್ಕೆ ಎಲುಬು ಮತ್ತು ಕಾಲಿಗೆ ಗಾಯಗಳು ಆಗಿದ್ದವು ಮತ್ತು ಎಡ ಕೈಗೆ ಕೂಡ ಗಾಯಗಳು ಆಗಿದ್ದವು. ಮೊದಲಿಗೆ ನಮ್ಮನ್ನು ತರೀಕೆರೆಯ ಆಸ್ಪತ್ರೆಗೆ ಸೇರಿಸಿ ನಂತರ ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಕೆ.ಎಸ್.ಆರ್.ಟಿ. ಸಿ. ವಾಹನದ ಚಾಲಕನನ್ನು ನೋಡಿಲ್ಲ ಮತ್ತು ಪೋಲೀಸರು ನನಗೆ ತೋರಿಸಿಲ್ಲ. ನನಗೆ ಬಸ್ಸಿನ ನಂಬರ್ ಮತ್ತು ಬೈಕಿನ ನಂಬರ್ ಹೇಳಲು ಆಗುವುದಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಚಾಸ-2 ರವರಿಗೆ ಸೇರಿದ ವಾಹನದ ಸಂಖ್ಯೆ.ಕೆಎ.66.ಕೆಎ.4469 ಎಂದರೆ ನನಗೆ ಗೊತ್ತಾಗುವುದಿಲ್ಲ. ಕೆ.ಎಸ್.ಆರ್.ಟಿ.ಸಿ ಬಸ್ಸಿನ ಸಂಖ್ಯೆ.ಕೆ.ಎ.14 ಎಫ್.0073 ಎಂದರೆ ನನಗೆ ಗೊತ್ತಿಲ್ಲ. ಬಸ್ಸು ವೇಗವಾಗಿ ಬಂತು ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಆ ದಿನ ಬಸ್ಸನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಕೆ.ಎಸ್.ಆರ್.ಟಿ.ಸಿ ಬಸ್ಸು ನಮಗೆ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿರುತ್ತದೆ. ಆ ಕಾರಣಕ್ಕೆ ಯಾವ ವೇಗದಲ್ಲಿ ಅದು ಬಂತು ಎಂದು ನಾನು ಗಮನಿಸಿಲ್ಲ ಎಂದರೆ ಸರಿಯಲ್ಲ. ಚಾಸ-2 ರವರಿಗೆ 80 ಕ್ಕಿಂತ ಹೆಚ್ಚು ವಯಸ್ಸು ಆಗಿದೆ ಎಂದರೆ ಸರಿ. ಅಪಘಾತ ಆಗಿದೆ ಎನ್ನುವ ಸ್ಥಳದಲ್ಲಿ ಯಾವಾಗಲೂ ಜನ ಸಂದಣಿ ಇರುತ್ತದೆ ಎಂದರೆ ಸರಿ. ಅದು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಚಾಸ-2 ರವರಿಗೆ ಅತೀ ಹೆಚ್ಚು ವಯಸ್ಸು ಆಗಿರುವುದರಿಂದ ವಾಹನವನ್ನು ನಿಯಂತ್ರಣ ಮಾಡಲಾಗದೆ ರಸ್ತೆ ಮೇಲೆ ಬೀಳಿಸಿದ್ದಾರೆ, ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.